# ದ್ವಿತೀಯ ಪಿ.ಯು.ಸಿ. ರಾಜ್ಯಶಾಸ್ತ್ರ ಮಾದರಿ ಪ್ರಶ್ನೆಪತ್ರಿಕೆ – II

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **10×1=10**

1. ಭಾರತದ ಉಕ್ಕಿನ ಮನುಷ್ಯ ಎಂದು ಯಾರನ್ನು ಕರೆಯುತ್ತಾರೆ?
2. ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷ ಯಾವುದು?
3. ಭಾರತದ ಚುನಾವಣಾ ಆಯೋಗದ ಆಯುಕ್ತರನ್ನು ಯಾರು ನೇಮಿಸುತ್ತಾರೆ?
4. NOTA ವಿಸ್ತರಿಸಿ.
5. ಕೇಂದ್ರ ಸೇವೆಗೆ ಒಂದು ಉದಾಹರಣೆಗೆ ಕೊಡಿ.
6. ಜಿಲ್ಲಾಡಳಿತದ ಮುಖ್ಯಸ್ಥರು ಯಾರು?
7. ಆರ್ಥಿಕ ಶೋಷಣೆ ಎಂದರೇನು?
8. ಯಾವ ದಿನವನ್ನು ಕಾರ್ಮಿಕರ ದಿನವನ್ನಾಗಿ ಆಚರಿಸಲಾಗುತ್ತದೆ.
9. ಪ್ರಜಾಸತ್ತಾತ್ಮಕ ಚಳುವಳಿ ಎಂದರೇನು?
10. ಭಾರತದ ವಿದೇಶಾಂಗ ನೀತಿಯ ಪಿತಾಮಹ ಯಾರು?

**II. ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2–3 ವಾಕ್ಯಗಳಲ್ಲಿ ಉತ್ತರಿಸಿ.** **10×2=20**

11. ಪ್ಯಾರಾಮೌಂಟ್ಸಿ ಎಂದರೇನು?
12. ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಹೋರಾಟ ಎಲ್ಲಿ ಮತ್ತು ಯಾವಾಗ ನಡೆಯಿತು?
13. ಬಾಲಕಾರ್ಮಿಕ ಪದ್ಧತಿ ಎಂದರೇನು?
14. ಸಮ್ಮಿಶ್ರ ಸರಕಾರದ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.
15. ಸಾಮಾನ್ಯ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಯಾವ ವಿಷಯದಲ್ಲಿ ರಾಜ್ಯಸರ್ಕಾರಗಳಿಗೆ ಸಲಹೆ ನೀಡಬಹುದು?
16. ಭಾರತದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಇರುವ ಯಾವುದಾದರೂ ಎರಡು ಅಡಚಣೆಗಳನ್ನು ತಿಳಿಸಿ.
17. ಸಿರಿಯಾದ ಯಾವುದಾದರೂ ಎರಡು ಜನಾಂಗೀಯ ಗುಂಪುಗಳನ್ನು ಹೆಸರಿಸಿ.
18. ರಾಷ್ಟ್ರೀಯ ಶಕ್ತಿ ಎಂದರೇನು?
19. ವಿಶ್ವಸಂಸ್ಥೆಯ ಯಾವುದಾದರೂ ಎರಡು ಉದ್ದೇಶಗಳನ್ನು ತಿಳಿಸಿ.
20. ಪ್ರಥಮ NAM ಸಮ್ಮೇಳನ ಯಾವಾಗ ಮತ್ತು ಎಲ್ಲಿ ನಡೆಯಿತು?
21. ಯಾವುದಾದರೂ ಎರಡು ಮಿಲಿಟರಿ ಬಣಗಳನ್ನು ಹೆಸರಿಸಿ.
22. ಬಾಂಗ್ಲಾದೇಶದ ವಿಮೋಚನೆಗೆ ಕಾರಣವಾದ ಎರಡು ಅಂಶಗಳನ್ನು ಬರೆಯಿರಿ.

**III. ಈ ಕೆಳಗಿನ ಯಾವುದಾದರೂ ಎಂಟು ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ.** **8×5=40**

23. 1947ರ ಭಾರತ ಸ್ವಾತಂತ್ರ್ಯ ಕಾಯ್ದೆಯ ಮುಖ್ಯಾಂಶಗಳನ್ನು ತಿಳಿಸಿ.
24. ಪಟೇಲ್‌ಸ್ಕೀಮ್ ಎಂದರೇನು? ವಿವರಿಸಿ.
25. ವಿದ್ಯುನ್ಮಾನ ಮತಯಂತ್ರದ ಪ್ರಯೋಜನಗಳಾವುವು?
26. ಜಿಲ್ಲಾಡಳಿತದಲ್ಲಿ ಜಿಲ್ಲಾಧಿಕಾರಿಯ ಪಾತ್ರವೇನು? ಚರ್ಚಿಸಿ.
27. ರೈತ ಚಳುವಳಿಯ ರಾಜಕೀಯ ಪರಿಣಾಮವನ್ನು ತಿಳಿಸಿ.
28. ಪರಿಸರ ಸಂರಕ್ಷಣೆಯಲ್ಲಿ ಸಾಲುಮರದ ತಿಮ್ಮಕ್ಕಳ ಪಾತ್ರವನ್ನು ವಿಶ್ಲೇಷಿಸಿ.
29. "ಲಿಂಗಾಧಾರಿತ ತಾರತಮ್ಯ ಪ್ರಜಾಪ್ರಭುತ್ವದ ಕಳಂಕ" ಹೇಗೆ? ವಿವರಿಸಿ.
30. 86ನೇ ತಿದ್ದುಪಡಿ ಕಾಯ್ದೆಯ ಪ್ರಕಾರ ಅನಕ್ಷರತಾ ನಿವಾರಣೆಗೆ ಸಂವಿಧಾನಾತ್ಮಕ ಕ್ರಮಗಳಾವುವು?
31. "ಯುವಜನಾಂಗ ಭಾರತದ ರಾಜಕೀಯ ವ್ಯವಸ್ಥೆಯನ್ನು ಬದಲಿಸಬಲ್ಲದು" ಚರ್ಚಿಸಿ?
32. ಭಾರತ–ಸಾರ್ಕ್‌ನ ಐದು ಸಹಕಾರ ಕ್ಷೇತ್ರಗಳನ್ನು ಕುರಿತು ವಿವರಿಸಿ.
33. ಪಂಚಶೀಲ ತತ್ವಗಳ ಕುರಿತು ಟಿಪ್ಪಣಿ ಬರೆಯಿರಿ.
34. ಭಾರತ ಮತ್ತು ಪಾಕಿಸ್ತಾನ ಸಂಬಂಧದಲ್ಲಿ ಕಾಶ್ಮೀರ ಸಮಸ್ಯೆಯನ್ನು ವಿಶ್ಲೇಷಿಸಿ.

**I.** **ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ.** **2 × 10=20**

35. ಪ್ರತ್ಯಕ್ಷ ಮತ್ತು ಪರೋಕ್ಷ ಚುನಾವಣೆಗಳ ನಡುವಿನ ವ್ಯತ್ಯಾಸಗಳಾವುವು? ವಿವರಿಸಿ.
36. ರಾಷ್ಟ್ರನಿರ್ಮಾಣದ ವಿವಿಧ ಅಗತ್ಯಾಂಶಗಳನ್ನು ವಿವರಿಸಿ.
37. ನೇಪಾಳದ ಪ್ರಜಾಸತ್ತಾತ್ಮಕ ಚಳುವಳಿಯನ್ನು ವಿವರಿಸಿ.
38. ವಿಶ್ವಸಂಸ್ಥೆಯ ಸ್ಥಾಪನೆ ಮತ್ತು ಪ್ರಗತಿಯಲ್ಲಿ ಭಾರತದ ಪಾತ್ರವನ್ನು ವಿವರಿಸಿ.

**II.** **ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15–20 ವಾಕ್ಯಗಳಲ್ಲಿ ಉತ್ತರಿಸಿ.** **2 × 05=10**

39. ಕೇಂದ್ರ ಸಚಿವಾಲಯ ಕುರಿತು ಟಿಪ್ಪಣಿ ಬರೆಯಿರಿ.

ಅಥವಾ

ನಿಮ್ಮ ಕಾಲೇಜಿನಲ್ಲಿ ಏರ್ಪಡಿಸಿದ ರಾಜ್ಯಶಾಸ್ತ್ರ ವಿಷಯದ ವಿಶೇಷ ಉಪನ್ಯಾಸ ಕುರಿತು ವರದಿ ಬರೆಯಿರಿ.

40. ಆಪ್ತಸ್ನೇಹಿ ಬಂಡವಾಳಶಾಹಿಯ ಸ್ವರೂಪವನ್ನು ಚರ್ಚಿಸಿ.

ಅಥವಾ

ಭಾರತ ಮತ್ತು ಅಮೇರಿಕಾ ನಡುವಿನ ಸಂಬಂಧಗಳ ಕುರಿತು ಟಿಪ್ಪಣಿ ಬರೆಯಿರಿ.

# II PUC POLITICAL SCIENCE MODEL QUESTION PAPER-2

**I. Answer the following questions in one sentence each 10x1=10**

1. Who is called as ñThe Iron Man of Indiaò?
2. Which political party secured majority in the Ist general election?
3. Who appoints the Chief Election Commissioner of India?
4. Expand NOTA.
5. Give an example to Central Services.
6. Who is the Head of District Administration ?
7. What is economic exploitation?
8. Which day is celebrated as ñThe Labours Dayò ?
9. What is Democratic Movement ?
10. Who is the architector of India s foreign policy ?

**II. Answer any ten of the following questions in 2-3 sentences 10x2=20**

11. What is Paramountcy ?
12. When and where the Backward Classes Movement started in Karnataka ?
13. What is the ñChild Labour Systemò ?
14. State any two features of coalition government.
15. On what matters the central government can advice the states during normal times ?
16. State any two obstacles in removing corruption in India.
17. Name any two racial groups of Syria.
18. What is National Power ?
19. State any two objectives of the UN.
20. When the first NAM Summit was held and where ?
21. Name any two Power Blocks.
22. Write any two reasons for the liberation of Bangladesh.

**III. Answer any eight of the following questions in 15-20 sentences 8x5=40**

23. State the main provisions of the Government of India Act 1947.
24. Explain ñPatel Schemeò
25. What are the advantages of EVM ?
26. Discuss the role of Deputy Commissioner in District Administration.
27. Explain the political implications of Peasants Movement.
28. Elucidate the role of ñSaalumarada Thimmakkaò in Environmental Protection.
29. How the Gender Based Inequality is a slur to Democracy ?
30. What are the constitutional measures taken to eradicate the Illiteracy as per the $86^{th}$ Constitutional Amendment Act.
31. ñThe youth of India can change the Indian Political Systemò. Discuss.
32. Explain any five areas of cooperation between India and SAARC.
33. Write a note on the principles of Panchasheel.
34. Analyse the Kashmir issue in relation to India and Pakistan.

**IV. Answer any two of the following questions in 30-40 sentences 2x10=20**

35. Distinguish between Direct and Indirect elections.
36. Describe the essentials of Nation-building.
37. Explain the Democratic Movement in Nepal.
38. Discuss India s role in the establishment of UN and its powers.

V. **Answer the following question in 15-20 sentences. 2x5=10**

39. Write a note on Union Secretariat.

OR

Write a report on the special lecture on Political Science conducted in your College.

40. Discuss the nature of Crony Capitalism.

OR

Write a note about the relationship between India and America.

**ಉತ್ತರಗಳು–2**

| | | |
|---|---|---|
| **I.** | **1.** | ಸರ್ದಾರ್ ವಲ್ಲಭ ಬಾಯಿ ಪಟೇಲ್ |
| | **2.** | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ |
| | **3.** | ರಾಷ್ಟ್ರಪತಿ |
| | **4.** | **None of the above (ಮೇಲಿನವರ್‍ಯಾರೂ ನನ್ನ ಆಯ್ಕೆ ಅಲ್ಲ)** |
| | **5.** | ಭಾರತೀಯ ವಿದೇಶಿ ಸೇವೆ, ಭಾರತೀಯ ರೈಲ್ವೆ ಸೇವೆ, ಭಾರತೀಯ ಅಂಚೆಸೇವೆ |
| | **6.** | ಜಿಲ್ಲಾಧಿಕಾರಿ |
| | **7.** | ಬಡತನ ರೇಖೆಗಿಂತ ಕೆಳಗಿರುವ, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೇಲೆ ಶ್ರೀಮಂತ ವರ್ಗದಿಂದ ನಡೆಯುವ ಆರ್ಥಿಕ ಶೋಷಣೆ |
| | **8.** | ಮೇ, 1 |
| | **9.** | ನಿರಂಕುಶ ಪ್ರಭುತ್ವ ಮತ್ತು ಅಧಿಕಾರಯುಕ್ತ ಸರಕಾರಗಳನ್ನು ಕಿತ್ತೊಗೆದು, ಪ್ರಜಾತಂತ್ರ ವ್ಯವಸ್ಥೆಯನ್ನು ಸ್ಥಾಪಿಸಲು ನಡೆದ ಆಂದೋಲನ. |
| | **10.** | ಜವಾಹರಲಾಲ್ ನೆಹರೂ. |
| **II.** | **11.** | ಇದು ದೇಶೀಯ ಸಂಸ್ಥಾನಗಳ ಮೇಲೆ ಬ್ರಿಟಿಷ್ ಸರ್ಕಾರಕ್ಕೆ ಪಾರಮ್ಯತೆಯಾಗಿದ್ದು. ದೇಶೀಯ ಸಂಸ್ಥಾನಗಳು ಆಂತರಿಕ ವ್ಯವಹಾರ ನಿರ್ವಹಿಸಲು ಅಧಿಕಾರ ಹೊಂದಿದ್ದು, ಅವುಗಳ ಬಾಹ್ಯ ವ್ಯವಹಾರಗಳ ನಿರ್ವಹಣೆ ಬ್ರಿಟಿಷ್ ಸರ್ಕಾರದ ನಿಯಂತ್ರಣದಲ್ಲಿರುವುದೇ ಪ್ಯಾರಾಮೌಂಟ್ಸಿ. |
| | **12.** | ಮೈಸೂರು, 1920. |
| | **13.** | ಶಾಲಾ ಶಿಕ್ಷಣದಿಂದ ವಂಚಿತಗೊಳಿಸಿ, ಮಕ್ಕಳನ್ನು ಹೋಟೆಲ್‌ಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳು, ನೇಯ್ಗೆ ಮತ್ತು ಪಟಾಕಿ ಕಾರ್ಖಾನೆ ಇತ್ಯಾದಿಗಳಲ್ಲಿ ಕೆಲಸಕ್ಕೆ ನೇಮಿಸುವ ಪದ್ಧತಿಯೇ ಬಾಲಕಾರ್ಮಿಕ ಪದ್ಧತಿ. |
| | **14.** | ಎ) ಕನಿಷ್ಠ ಸಾಮಾನ್ಯ ಕಾರ್ಯಕ್ರಮದಡಿ ಸರ್ಕಾರ ರಚನೆ ಬಿ) ವಿಭಿನ್ನ ಹಿತಾಸಕ್ತಿಗಳಿಗೆ ಪ್ರಾತಿನಿಧ್ಯ |
| | **15.** | ಎ) ಅಂತರಾಷ್ಟ್ರೀಯ ಒಪ್ಪಂದಗಳನ್ನು ಜಾರಿಗೊಳಿಸುವಾಗ<br>ಬಿ) ರೈಲ್ವೆ–ಸಾರಿಗೆ, ಸಂಪರ್ಕ ವ್ಯವಸ್ಥೆ (ಇನ್ನಾವುದೇ) |
| | **16.** | ಎ) ನೈತಿಕತೆ ಕುಸಿತ ಬಿ) ಶಿಕ್ಷಣದ ಕೊರತೆ |
| | **17.** | ಎ) ಅರಬ್ಸ್ ಕರ್ಡ್ಸ್ ಬಿ) ಅರಮೋನಿಯನ್ಸ್ ಸಿ) ಅಸ್‌ಯಾರಿಯನ್ ಡಿ) ಟರ್ಕ್‌ಮೇನಿಸ್ |
| | **18.** | ರಾಷ್ಟ್ರದ ಜನಸಂಖ್ಯೆ, ಭೂ ಪ್ರದೇಶ, ಮಿಲಿಟರಿ ಶಕ್ತಿ, ರಾಷ್ಟ್ರೀಯ ರಕ್ಷಣೆ, ಆರ್ಥಿಕ ಮತ್ತು ರಾಜಕೀಯ ಶಕ್ತಿಗಳನ್ನೊಳಗೊಂಡ ರಾಷ್ಟ್ರದ ಒಟ್ಟು ಸಾಮರ್ಥ್ಯ ಮತ್ತು ಬಲವೇ ರಾಷ್ಟ್ರೀಯ ಶಕ್ತಿ. |
| | **19.** | ಎ) ರಾಷ್ಟ್ರಗಳ ನಡುವೆ ಸ್ನೇಹ–ಸಂಬಂಧಗಳನ್ನು ಹೆಚ್ಚಿಸಿ, ಆಕ್ರಮಣಕಾರಿ ರಾಷ್ಟ್ರದ ವಿರುದ್ಧ ಸಾಮೂಹಿಕ ಕ್ರಮ ತೆಗೆದುಕೊಳ್ಳುವುದು. ಬಿ) ಅಂತರ್‌ರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನವೀಯ ಸಮಸ್ಯೆಗಳನ್ನು ನಿವಾರಿಸಲು ಸಹಕರಿಸುವುದು. |
| | **20.** | 1961, ಯುಗೋಸ್ಲಾವಿಯಾದ ಬೆಲ್ಗ್ರೇಡ್ |
| | **21.** | NATO, SEATO, CENTO, ANZUS |
| | **22.** | ಎ) ಪೂರ್ವ ಪಾಕಿಸ್ತಾನದ ಅಭಿವೃದ್ಧಿಯ ಕಡೆಗಣನೆ ಬಿ) ಬಂಗಾಳಿ ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಕೀಳು ಭಾವನೆ (ಇನ್ನಾವುದೇ) |
| **III.** | **23.** | • 15ನೇ ಆಗಸ್ಟ್ 1947ರಂದು ಭಾರತ ಮತ್ತು ಪಾಕಿಸ್ಥಾನ ಎಂಬ ಎರಡು ಸ್ವತಂತ್ರ ಡೊಮಿನಿಯನ್‌ಗಳನ್ನು ಸ್ಥಾಪಿಸುವುದು.<br>• ಭಾರತದ ರಾಜ್ಯಗಳ ಮೇಲೆ ಬ್ರಿಟಿಷ್ ಚಕ್ರವರ್ತಿಯ ಅಧಿಪತ್ಯ ಕೊನೆಗೊಳ್ಳುವುದು.<br>• ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಹುದ್ದೆಯ ರದ್ದತಿ<br>• ಗೌರ್ನರ್ ಜನರಲ್ ಮತ್ತು ಪ್ರಾಂತೀಯ ಗೌರ್ನರ್‌ಗಳು ಸಂವಿಧಾನಾತ್ಮಕ ಮುಖ್ಯಸ್ಥರಾಗಿದ್ದರೂ, ಶಾಸನ ರಚಿಸುವ ವಿಶೇಷ ಅಧಿಕಾರವನ್ನು ಹೊಂದಿರುವುದಿಲ್ಲ.<br>• ಭಾರತ, ಪಾಕಿಸ್ತಾನಗಳ ಗಡಿ ನಿರ್ಧಾರಕ್ಕೆ ಬೌಂಡರಿ ಕಮಿಷನ್ ಸ್ಥಾಪನೆ. |

| | | |
|---|---|---|
| | **24.** | ಮೂರು ಹಂತಗಳಲ್ಲಿ ಜರುಗಿದ ಭಾರತದ ಪ್ರಾಂತ್ಯಗಳ ಏಕೀಕರಣದ ಪ್ರಕ್ರಿಯೆಯೇ ಪಟೇಲ್‌ಸ್ಕೀಮ್<br>• ಸಣ್ಣ ರಾಜ್ಯಗಳನ್ನು ಅವುಗಳೊಂದಿಗೆ ಹೊಂದಿಕೊಂಡಿರುವ ಪ್ರಾಂತ್ಯಗಳೊಂದಿಗೆ ವಿಲೀನ ಮಾಡುವುದು. ಉದಾ: ಒರಿಸ್ಸಾದೊಂದಿಗೆ 24 ರಾಜ್ಯಗಳು ಸೆಂಟ್ರಲ್ ಪ್ರಾವಿನ್ಸ್‌ನೊಂದಿಗೆ 14 ರಾಜ್ಯಗಳು ಇತ್ಯಾದಿ.<br>• ಹಲವಾರು ಸಣ್ಣ ರಾಜ್ಯಗಳು ಸೇರಿ ಒಂದು ದೊಡ್ಡರಾಜ್ಯವನ್ನು ರಚಿಸುವುದು ಉದಾ: ಸೌರಾಷ್ಟ್ರದ, PEPSU<br>• ಸಣ್ಣ ಮತ್ತು ಹಿಂದುಳಿದ ಸುಮಾರು 61 ರಾಜ್ಯಗಳನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಪರಿವರ್ತಿಸಿ, ಚೀಫ್ ಕಮೀಷನರ್ಸ್ ಪ್ರಾಂತ್ಯಗಳನ್ನಾಗಿ ಮಾಡುವುದು. ಉದಾ: ಹಿಮಾಚಲ ಪ್ರದೇಶ, ಅಜ್ಮೀರ್, ಕೂರ್ಗ್, ಕೂಚ್–ಬಿಹಾರ್. |
| | **25.** | ಶೀಘ್ರ ಮತ್ತು ಸ್ಪಷ್ಟ ಫಲಿತಾಂಶ, ಮಿತವ್ಯಯ ಮತ್ತು ಪರಿಸರಸ್ನೇಹಿ, ತಿರಸ್ಕೃತ ಮತಗಳನ್ನು ತಡೆಗಟ್ಟುತ್ತದೆ, ಚುನಾವಣಾ ಅಕ್ರಮಗಳನ್ನು ತಡೆಯಲು ಸಹಾಯಕಾರಿ, ಸುಲಭ ಬಳಕೆ ಇತ್ಯಾದಿ |
| | **26.** | ಕಾನೂನು ಮತ್ತು ಸುವ್ಯವಸ್ಥೆ ಹಾಗೂ ದಂಡಾಧಿಕಾರಿಯಾಗಿ, ಕಂದಾಯ ಸಂಗ್ರಹಣಾಧಿಕಾರಿಯಾಗಿ, ಜಿಲ್ಲಾ ಅಭಿವೃದ್ಧಿ ಅಧಿಕಾರಿಯಾಗಿ, ಜಿಲ್ಲಾ ಚುನಾವಣಾಧಿಕಾರಿಯಾಗಿ, ವಿಪತ್ತು ನಿರ್ವಹಣಾಧಿಕಾರಿಯಾಗಿ, ಸಾರ್ವಜನಿಕ ಕುಂದು–ಕೊರತೆಗಳ ನಿವಾರಣಾಧಿಕಾರಿಯಾಗಿ |
| | **27.** | ಕೃಷಿ ಸಾಲ ಯೋಜನೆ, ರಾಷ್ಟ್ರೀಯ ಕೃಷಿ ಸಾಲಯೋಜನೆ, ಸಾಲಮನ್ನಾ, ರೈತ ಸಂಪರ್ಕ ಕೇಂದ್ರಗಳ ಸ್ಥಾಪನೆ, ಪಶುವೈದ್ಯಕೀಯ ಸೇವೆ ಇತ್ಯಾದಿ |
| | **28.** | ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹುಲಿಕಲ್ಲು ಗ್ರಾಮದ ತಿಮ್ಮಕ್ಕ ರಸ್ತೆಯ ಇಕ್ಕೆಲುಗಳಲ್ಲಿ 248 ಸಸಿಗಳನ್ನು ನೆಟ್ಟು ಮಕ್ಕಳಂತೆ ಪೋಷಣೆ |
| | **29.** | ಮನುಸ್ಮೃತಿ, ಪುರುಷರ ಪ್ರಾಬಲ್ಯ, ಶಿಕ್ಷಣದ ನಿರಾಕರಣೆ, ವರದಕ್ಷಿಣೆ ಪದ್ಧತಿ, ಸೂಕ್ತ ಪ್ರಾತಿನಿಧ್ಯ ನೀಡದಿರುವುದು. (ವಿವರಣೆ) |
| | **30.** | • 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾತಮಿಕ ಶಿಕ್ಷಣ ಒದಗಿಸುವುದು ಸರ್ಕಾರದ ಜವಾಬ್ದಾರಿ.<br>• ಪೋಷಕರು ಮತ್ತು ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಕಡ್ಡಾಯ<br>• ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಒಪ್ಪಿದ ಸೂತ್ರದನ್ವಯ ಇದಕ್ಕೆ ತಗುಲುವ ಖರ್ಚು ನಿಭಾಯಿಸಬೇಕು.<br>• ಶಾಲಾ ಆಡಳಿತ ಮಂಡಳಿ ಅಥವಾ ಸ್ಥಳೀಯ ಪ್ರಾಧಿಕಾರವು ಶಾಲೆಯಿಂದ ಹೊರಹೋದ ಮಕ್ಕಳನ್ನು ಗುರುತಿಸಿ, ಶಾಲೆಗೆ ದಾಖಲಿಸುವುದು.<br>• ಅನುದಾನಿತ ಮತ್ತು ಅಲ್ಪಸಂಖ್ಯಾತರ ಅನುದಾನರಹಿತ ಶಾಲೆಗಳು ಹಿಂದುಳಿದ ವರ್ಗಗಳ ಮತ್ತು ದುರ್ಬಲ ವರ್ಗಗಳಿಗೆ ಸೇರಿದ ಮಕ್ಕಳಿಗೆ ಶೇಕಡಾ 25ರಷ್ಟು ಸ್ಥಾನಗಳನ್ನು ಮೀಸಲಿಡಬೇಕು. |
| | **31.** | • 8 ಬಿಲಿಯಾನ್‌ಗಿಂತಲೂ ಹೆಚ್ಚು ಮತದಾರರನ್ನು ಹೊಂದಿರುವ ಭಾರತದಲ್ಲಿ ಶೇಕಡಾ 70ರಷ್ಟು ಯುವ ಮತದಾರದಿದ್ದಾರೆ.<br>• ಯುವಜನತೆಯ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹುಮ್ಮಸ್ಸು ತುಂಬುವ ಕಾರ್ಯ.<br>• ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಯುವಜನರ ಸಕ್ರೀಯ ಪಾಲ್ಗೊಳ್ಳುವಿಕೆ.<br>• ಯುವಜನತೆ ಸಂಪ್ರದಾಯಬದ್ಧ ತಾರತಮ್ಯಗಳೆಲ್ಲವನ್ನು ಮೀರಿ, ದೇಶವನ್ನು ಎಲ್ಲಾ ರೀತಿಯ ಸಂಕಷ್ಟಗಳಿಂದ ಮುಕ್ತಗೊಳಿಸಿ ರಾಜಕೀಯ ಕ್ಷೇತ್ರವನ್ನು ಶುದ್ಧಗೊಳಿಸುವ ಅದ್ಭುತ ಶಕ್ತಿಯಾಗಿದ್ದಾರೆ.<br>• ಯುವಜನರ ಕ್ರಾಂತಿಕಾರಕ ಮನೋಭಾವ ರಾಜಕೀಯದಲ್ಲಿ ಹೊಸ ಸಂಚಲನ ಮನೋಭವವನ್ನು ಮೂಡಿಸಿದೆ. |
| | **32.** | ಸಾರ್ಕ್‌ನ ಪ್ರಾದೇಶಿಕ ಕೇಂದ್ರಗಳು, ಆರ್ಥಿಕ ಸಹಕಾರ, ಜನರು ಜನರಿಗಾಗಿ ಸಂಪರ್ಕ, ಶೈಕ್ಷಣಿಕ ಸಹಕಾರ, ಭಯೋತ್ಪಾದನೆ ವಿರುದ್ಧ ಹೋರಾಟ (ವಿವರಣೆ) |

| | | | |
|---|---|---|---|
| | **33.** | 1954ರಂದು ಭಾರತದ ನೆಹರೂ ಹಾಗೂ ಚೀನಾ ಪ್ರಧಾನಿ ಚೌ-ಯನ್-ಲಾಯ್ ನಡುವಿನ ಒಪ್ಪಂದ ಪಂಚಶೀಲ ತತ್ವಗಳು-ಪರಸ್ಪರ ದೇಶಗಳ ನಡುವಿನ ಪ್ರಾದೇಶಿಕ ಐಕ್ಯತೆ ಮತ್ತು ಸಾರ್ವಭೌಮತ್ವವನ್ನು ಗೌರವಿಸುವುದು-ಪರಸ್ಪರರು ದಾಳಿ ಮಾಡದಿರುವುದು-ಪರಸ್ಪರರು ಆಂತರಿಕ ಹಸ್ತಕ್ಷೇಪ ಮಾಡದಿರುವುದು-ಸಮಾನತೆ ಮತ್ತು ಪರಸ್ಪರ ಅವಕಾಶಗಳು-ಶಾಂತಿಯುತ ಸಹಬಾಳ್ವೆ | |
| | **34.** | ಕಾಶ್ಮೀರ ಭಾರತ ಗಣರಾಜ್ಯದ ಅವಿಭಾಜ್ಯ ಅಂಗವಾಗಿದೆ, ಭಾರತ ಮತ್ತು ಪಾಕಿಸ್ತಾನ ನಡುವಣ 1965, 1971ರ ಯುದ್ಧಗಳು, 1965 ಮತ್ತು 1972ರಲ್ಲಿ ನಡೆದ ಒಪ್ಪಂದಗಳು, 1999ರ ಕಾರ್ಗಿಲ್ ಕದನ, ಗಡಿರೇಖೆಯಲ್ಲಿ ನಡೆಯುತ್ತಿರುವ ಗುಂಡಿನ ಚಕಮಕಿ | |
| **IV.** | **35.** | **ಪ್ರತ್ಯಕ್ಷ ಚುನಾವಣೆ** | **ಪರೋಕ್ಷ ಚುನಾವಣೆ** |
| | | 1. ಹೆಚ್ಚು ಪ್ರಜಾಸತ್ತಾತ್ಮಕ ವಾದುದು | 1.ಕಡಿಮೆ ಪ್ರಜಾಸತ್ತಾತ್ಮಕವಾದುದು |
| | | 2. ಪ್ರಚಾರದ ಆರ್ಭಟ | 2. ಆರ್ಭಟ ಇಲ್ಲ |
| | | 3. ರಾಜಕೀಯ ಪ್ರಜ್ಞೆ ಮೂಡಿಸುತ್ತದೆ | 3. ರಾಜಕೀಯ ಪ್ರಜ್ಞೆ ಮೂಡಿಸುವುದಿಲ್ಲ. |
| | | 4. ಯೋಗ್ಯ ಅಭ್ಯರ್ಥಿಗಳ ಆಯ್ಕೆಸಾಧ್ಯ | 4. ಯೋಗ್ಯ ಅಭ್ಯರ್ಥಿಗಳ ಆಯ್ಕೆ ಸಾಧ್ಯವಿಲ್ಲ. |
| | | 5. ಸಾರ್ವಜನಿಕರೊಂದಿಗೆ ಸಂಪರ್ಕ | 5. ಸಾರ್ವಜನಿಕರೊಂದಿಗೆ ಸಂಪರ್ಕ ಸಾಧ್ಯವಿಲ್ಲ. |
| | | 6. ಶಾಂತಿಯುತ ಮತದಾನ ಕಷ್ಟಸಾಧ್ಯ | 6. ಶಾಂತಿಯುತ ಮತದಾನ ಪರಿಪೂರ್ಣ ಸಾಧ್ಯ. |
| | | 7. ಭಾವೋದ್ರೇಕಕ್ಕೆ ಆಸ್ಪದ ಮಾಡಿ | 7. ಆಸ್ಪದ ವಿಲ್ಲ |
| | | 8. ಮುಂದುವರಿದ ರಾಷ್ಟ್ರಗಳಿಗೆ ಸೂಕ್ತ | 8. ಹಿಂದುಳಿದ ರಾಷ್ಟ್ರಗಳಿಗೆ ಸೂಕ್ತ |
| | **36.** | ಜನತೆಯ ಬೆಂಬಲ-ಉತ್ತಮ ಆಡಳಿತ-ಸಮರ್ಥ ಸಂಸ್ಕೃತಿ-ಅಧಿಕಾರದ ಹಂಚಿಕೆ-ಸಾರ್ವತ್ರಿಕ ಶಿಕ್ಷಣ-ರಾಷ್ಟ್ರೀಯ ಗುಣ-ಸಮೂಹ ಮಾಧ್ಯಮಗಳು-ಜವಬ್ದಾರಿಯುತ ಬೌದ್ಧಿಕತೆ-ರಾಷ್ಟ್ರೀಯ ಸಮಗ್ರತೆ | |
| | **37.** | ಎ) ನೇಪಾಳದಲ್ಲಿ 18ನೆ ಶತಮಾನದಿಂದಲೂ ರಾಜಪ್ರಭುತ್ವ<br>ಬಿ) ಅಲ್ಲಿನ ಪ್ರಜಾಸತ್ತಾತ್ಮಕ ಚಳುವಳಿಗೆ ಪ್ರೇರಣೆ ಭಾರತ<br>ಸಿ) 1980ರಲ್ಲಿ ಸೀಮಿತ ಪ್ರಜಾಪ್ರಭುತ್ವಕ್ಕೆ ನಾಂದಿ<br>ಡಿ) 1996ರಲ್ಲಿ ಮಾವೋವಾದಿಗಳ ರಾಜಕೀಯ ಕದನಕ್ಕೆ ಚಾಲನೆ<br>ಇ) 2001ರಲ್ಲಿ ರಾಜಪ್ರಭುತ್ವದ ವಿರುದ್ಧ ಜಯ<br>ಎಫ್) 2006ರಲ್ಲಿ ಜನಾಂದೋಲನ ಪ್ರಾರಂಭ<br>ಜಿ) 18ನೇ ಮೇ 2006ರಲ್ಲಿ ದೊರೆಯ ಆಡಳಿತ ಅಂತ್ಯ, ಪ್ರಜಾಪ್ರಭುತ್ವ ಉಗಮ | |
| | **38.** | ಭಾರತ ಮತ್ತು ವಿಶ್ವಸಂಸ್ಥೆ<br>ಮೂಲ ಸದಸ್ಯರಾಷ್ಟ್ರ-ಸಾಮಾನ್ಯ ಸಭೆಯಲ್ಲಿ ಭಾರತದ ಪಾತ್ರ-ವಿಶ್ವಸಂಸ್ಥೆಯ ಅಂಗ ಸಂಸ್ಥೆಯೊಂದಿದು ಕಾರ್ಯ ಯೋಜನೆಗೆ ಸಹಕಾರ-ವಿಶ್ವಸಂಸ್ಥೆಯ ಶಾಂತಿಪಾಲನಪಡೆಗೆ ಸಹಾಯ-ಪರಿಸರ ರಕ್ಷಣೆಯಲ್ಲಿ ಪಾತ್ರ | |
| **V.** | **39.** | ಕೇಂದ್ರಸರಕಾರದ ಅತ್ಯುನ್ನತ ಆಡಳಿತಾತ್ಮಕ ಕಚೇರಿ-ಸಂಪುಟ ಕಾರ್ಯದರ್ಶಿ ಮುಖ್ಯಸ್ಥರು-ಇಲಾಖೆ, ಭಾಗ, ವಿಭಾಗ, ಶಾಖೆಗಳಾಗಿ ವಿಂಗಡಣೆ- ಎಲ್ಲ ಇಲಾಖೆಗಳ ನಡುವೆ ಸಂಯೋಜನೆ-ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಜವಾಬ್ದಾರಿ. | |
| | | **ಅಥವಾ** | |
| | | ಪೂರ್ವಸಿದ್ಧತೆ-ಕಾರ್ಯಕ್ರಮ ನಡೆದ ರೀತಿ-ಉಪನ್ಯಾಸದ ವಿಷಯವಸ್ತು-ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹಣೆ-ಉಪಸಂಹಾರ (ವಿವರಣೆ) | |
| | **40.** | ರಾಜಕೀಯ ಹತೋಟಿ ಪರವಾಗಿರುತ್ತದೆ-ಆಪ್ತಸ್ನೇಹಿ ಬಂಡವಾಳ ಮತ್ತು ಪ್ರತಿಫಲ-ಆಸ್ತಿಯ ಸಂರಕ್ಷಣೆ-ಲಾಭಾಂಶದ ಹಣ ಸಂಬಂಧಿಕರಲ್ಲಿ ಹಂಚಿಕೆ-ಆರ್ಥಿಕ ಶಕ್ತಿಯ ಕೇಂದ್ರೀಕರಣ (ವಿವರಣೆ) | |
| | | **ಅಥವಾ** | |
| | | ಆರ್ಥಿಕ ಸಂಬಂಧಗಳು-ಮಿಲಿಟರಿ ಸಂಬಂಧಗಳು-ಭಾರತ Ï ಅಮೇರಿಕಾ ಅಣು ಒಪ್ಪಂದ-ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳು-ಇತ್ತೀಚಿನ ಪರಸ್ಪರ ಭೇಟಿಗಳು (ವಿವರಣೆ) | |

# ದ್ವಿತೀಯ ಪಿ.ಯು.ಸಿ. ರಾಜ್ಯಶಾಸ್ತ್ರ ಪ್ರಶ್ನೆ ಪತ್ರಿಕೆ ನೀಲಿ ನಕ್ಷೆ – 2

| ಅಧ್ಯಾಯ | ಪಠ್ಯಕ್ರಮ | ಭೋಧನಾ ಅವಧಿ | ಗರಿಷ್ಠ ಅಂಕಗಳು | Knowledge 40% | | | | Understanding 30% | | | | Application 20% | | | | Skill 10% | | | | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | 1 | 2 | 5 | 10 | 1 | 2 | 5 | 10 | 1 | 2 | 5 | 10 | 1 | 2 | 5 | 10 | |
| 1. | ಭಾರತದ ರಾಜಕೀಯ ವ್ಯವಸ್ಥೆಯ ಉಗಮ ಮತ್ತು ಬೆಳವಣಿಗೆ | 12 ಗಂಟೆಗಳು | 14 | 1 | 1 | 1 | | | | 1 | | | | | | 1 | | | | 5 |
| 2. | ಚುನಾವಣೆಗಳು ಮತ್ತು ಭಾರತದಲ್ಲಿ ಪಕ್ಷಪದ್ಧತಿ | 14 ಗಂಟೆಗಳು | 17 | | | | | 1 | | | 1 | 1 | | 1 | | | | | | 4 |
| 3. | ಭಾರತದಲ್ಲಿ ಆಡಳಿತ ಯಂತ್ರ | 10 ಗಂಟೆಗಳು | 12 | 1 | | 1 | | 1 | | | | | | | | | | 1 | | 4 |
| 4. | ಸಾಮಾಜಿಕ ಚಳುವಳಿಗಳು ಮತ್ತು ರಾಜಕೀಯ ಪರಿಣಾಮಗಳು | 12 ಗಂಟೆಗಳು | 14 | 1 | | 1 | | 1 | | 1 | | | 1 | | | | | | | 5 |
| 5. | ರಾಷ್ಟ್ರನಿರ್ಮಾಣ ಮತ್ತು ಪ್ರಜಾಸತ್ತೆ ಎದುರಿಸುತ್ತಿರುವ ಸವಾಲುಗಳು | 18 ಗಂಟೆಗಳು | 22 | | 1 | 1 | 1 | | | 1 | | | | | | | | | | 4 |
| 6. | ಭಾರತ ರಾಜಕೀಯದ ನೂತನ ಪ್ರವೃತ್ತಿಗಳು | 11 ಗಂಟೆಗಳು | 11 | | 1 | | | | 1 | | | | | | | | 1 | 1 | | 4 |
| 7. | ಸಮಕಾಲೀನ ರಾಜಕೀಯ ವಿದ್ಯಮಾನಗಳು | 13 ಗಂಟೆಗಳು | 18 | 1 | | | | | 1 | | | | | 1 | 1 | | | | | 4 |
| 8. | ಅಂತರ್‌ರಾಷ್ಟ್ರೀಯ ಸಂಬಂಧಗಳು ಮತ್ತು ವ್ಯವಸ್ಥೆ | 15 ಗಂಟೆಗಳು | 19 | | 1 | | 1 | | 1 | 1 | | | | | | | | | | 4 |
| 9. | ಭಾರತದ ವಿದೇಶಾಂಗ ನೀತಿ | 15 ಗಂಟೆಗಳು | 17 | 1 | 1 | 1 | | | 1 | 1 | | | 1 | | | | | | | 6 |
| **ಒಟ್ಟು** | | **120** | **144** | **5** | **5** | **5** | **2** | **3** | **4** | **5** | **1** | **1** | **2** | **2** | **1** | **1** | **1** | **2** | **0** | **40** |

**Note: 1. Weightage = Total marks / No. of Teaching Hour=144/120=1.28 (i.e. for 1Hour=1.28 Marks)**

**2. Choice = Out of 40 questions given, only 32 questions are to be answered.**